ಶ್ರೀ ಉಮೇಶ್ ಎ. ಕತ್ತಿ (ತೋಟಗರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) 715 ಅರ್ಜಿಗಳು ರೂ.178.00 ಲಕ್ಷಗಳ ಸಹಾಯಧನ ಕೋರಿ ಬಂದಿರುತ್ತವೆ.

ಈವರೆಗೆ 384 ಅರ್ಜಿಗಳಿಗೆ ರೂ.81.90 ಲಕ್ಷಗಳು ಬಿಡುಗಡೆಯಾಗಿರುತ್ತದೆ.

ಬಾಕಿ ಉಳಿದಿರುವ 331 ಅರ್ಜಿಗಳಿಗಾಗಿ ರೂ. 95.06 ಲಕ್ಷಗಳು ಬೇಕಾಗಿದ್ದು, ಭಾರತ ಸರ್ಕಾರಕ್ಕೆ ಅನುದಾನ ಬಿಡುಗಡೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ.

ಆ) ಚಾಲ್ತಿಯಲ್ಲಿರುವ ಆದೇಶದನ್ವಯ ಬೆಂಗಳೂರು ಗ್ರಾಮಾಂತರ ಜಿಲ್ಲಾ ರೈತರಿಗೆ ಶೇಕಡಾ 100 ರ ಸಹಾಯಧನ ನೀಡಲು ಬರುವುದಿಲ್ಲ.

ಇ) ಕೀಟನಾಷಕ ಹಾಗೂ ಕ್ರಿಮಿನಾಷಕ ಔಷಧಿಗಳಿಗೆ ಬೇಡಿಕೆಗೆ ಅನುಗುಣವಾಗಿ ರೂ. 5.80 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಆಧುನಿಕ ಕೃಷಿ ಉಪಕರಣಗಳಿಗಾಗಿ ರೂ.4.53 ಲಕ್ಷಗಳು ಬಿಡುಗಡೆಯಾಗಿರುತ್ತದೆ. ಇನ್ನೂ ರೂ.1.10 ಲಕ್ಷಗಳ ಬೇಡಿಕೆ ಇರುತ್ತದೆ.

ಈ) ಒಟ್ಟು 140 ರೈತರು

63 ರೈತರನ್ನು ಆಯ್ಕೆ ಮಾಡಲಾಗಿದೆ.

ಹಣದ ಪೂರೈಕೆ ಇದೆ.

ಬೆಳೆ ನಾಶಕ್ಕೆ ವಿಮೆ ಮತ್ತು ಪರಿಹಾರ

1020 (1443) ಶ್ರೀ ನಾರಾಯಣಸ್ವಾಮಿ ಎಂ. (ಬಂಗಾರ ಪೇಟೆ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ರೈತರು ಕಷ್ಟಪಟ್ಟು ಬೆಳೆದಿದ್ದ ಆಲೂಗಡ್ಡೆ ಮತ್ತು ಟೊಮ್ಯಾಟೋ ಬೆಳೆಗಳಿಗೆ ಅಂಗಮಾರಿ ರೋಗ ತಗುಲಿ ಬೆಳೆಗಳು ನಾಶವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ದಿಸೆಯಲ್ಲಿ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ, ಬೆಳೆ ಕಳೆದುಕೊಂಡು ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಇಲ್ಲಿಯವರೆಗೆ ಎಷ್ಟು ಪರಿಹಾರವನ್ನು ನೀಡಿದೆ;

ಇ) ಜಿಲ್ಲೆಗೆ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆವಿಗೆ ಎಷ್ಟು ಬೆಳೆ ವಿಮೆ ಹಣವನ್ನು ನೀಡಲಾಗದೆ (ಪ್ರತಿ ವರ್ಷ ನೀಡಿರುವ ಹಣದ ವಿವರಗಳನ್ನು ಮತಕ್ಷೇತ್ರವಾರು ಅಂಕಿ ಅಂಶಗಳಲ್ಲಿ ನೀಡುವುದು);

ಈ) ಒಂದು ವೇಳೆ ವಿಮೆ ಹಣವನ್ನು ಬಾಕಿ ಉಳಿಸಿಕೊಂಡಿದ್ದಲ್ಲಿ, ಇದಕ್ಕೆ ಕಾರಣಗಳೇನು;

ಉ) ಜಿಲ್ಲೆಯ ರೈತರು ಬೆಳೆಗಳನ್ನು ಕಳೆದುಕೊಂಡು ತೊಂದರೆಯಲ್ಲಿರುವುದರಿಂದ ಈ ವಿಮೆ ಹಣವನ್ನು ಕೂಡಲೇ ಬಿಡುಗಡೆ ಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಹೌದು.

ಆ) ಕೆಳಕಾಣಿಸಿದ ಕ್ರಮಗಳನ್ನು ಕೈಗೊಳ್ಳಲಾಗಿದೆ:

1. ರೈತರಿಗೆ ಉಂಟಾಗುವ ನಷ್ಟವನ್ನು ತಪ್ಪಿಸಲು, ರೋಗದ ಬಾಧೆಯನ್ನು ತಡೆಗಟ್ಟಲು ಇಲಾಖೆಯಿಂದ ಶೇ.50ರ ಸಹಾಯಧನದಲ್ಲಿ ಸಸ್ಯ ಸಂಸರಕ್ಷಣಾ ಔಷಧಿಗಳನ್ನು ವಿತರಿಸಿದೆ.
2. ಈ ಬೆಳೆಗಳಿಗೆ ಬರುವ ಅಂಗಮಾರಿ ರೋಗ ನಿಯಂತ್ರಣ ಕುರಿತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾಹಿತಿಯನ್ನು ಸಕಾಲದಲ್ಲಿ ರೈತರಿಗೆ ನೀಡಲಾಗಿದೆ. ದಿನಪತ್ರಿಕೆಗಳ ಮೂಲಕವೂ ಪ್ರಚಾರ ಮಾಡಲಾಗಿದೆ.

ರೈತರಿಗೆ ನಷ್ಟ ಪರಿಹಾರವನ್ನು ತೋಟಗಾರಿಕೆ ಇಲಾಖೆ ವಿತರಿಸುವ ಯೋಜನೆ ಇರುವುದಿಲ್ಲ.

ಇ) ಬೆಳೆ ವಿಮೆ ಯೋಜನೆಯನ್ನು ಕೃಷಿ ಇಲಾಖೆ ಜಾರಿಗೊಳಿಸುತ್ತಿದೆ. ಈ ಅನ್ವಯ 2006–07 ರಿಂದ 2008–09ನೇ ಸಾಲಿನವರೆಗೆ ಕೋಲಾರ ಜಿಲ್ಲೆಯಲ್ಲಿ ಒಟ್ಟು ರೂ. 38.17 ಲಕ್ಷಗಳನ್ನು ಬೆಳೆ ವಿಮಾ ನಷ್ಟ ಪರಿಹಾರವನ್ನು ವಿತರಿಸಲಾಗಿದೆ. ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.

ಈ) 2009–10ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ವಿಮಾ ನಷ್ಟ ಪರಿಹಾರ ಇತ್ಯರ್ಥಪಡಿಸುವುದು ಬಾಕಿ ಇರುತ್ತದೆ. ಬೆಳೆ ಇಳುವರಿ ಮಾಹಿತಿಯನ್ನು ದಿನಾಂಕ: 31.3.2010ರ ಒಳಗೆ ವಿಮಾ ಸಂಸ್ಥೆಗೆ ನೀಡಬೇಕಾಗಿದೆ.

ಉ) ಇಳುವರಿ ಮಾಹಿತಿಯನ್ನು ವಿಮಾ ಸಂಸ್ಥೆಗೆ ನಿಗಧಿತ ದಿನಾಂಕ ದೊಳಗೆ ನೀಡಿ ರೈತರ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸ ಲಾಗುವುದು.

ಅನುಬಂಧ

ಬೆಳೆ ವಿಮಾ ಯೋಜನೆಯಡಿ 2006-07 ರಿಂದ 2008-09ನೇ ಸಾಲಿನವರೆಗೆ ಕೋಲಾರ ಜಿಲ್ಲೆಯಲ್ಲಿ

ಇತ್ಯರ್ಥಪಡಿಸಲಾದ ಬೆಳೆ ವಿಮಾ ನಷ್ಟ ಪರಿಹಾರದ ತಾಲ್ಲೂಕುವಾರು ವಿವರಗಳು

ವರ್ಷ	ತಾಲ್ಲೂಕು	ಪಾಲ್ಗೊಂಡ ರೈತರ ಸಂಖ್ಯೆ.	ವಿಮಾಕಂತು (ರೂ.)	ಫಲಾನುಭವಿಗಳ(ಸಂಖ್ಯೆ)	ಬೆಳೆ ವಿಮಾ ನಷ್ಟ ಪರಿಹಾರ (ರೂ)
ರಾಷ್ಟ್ರೀಯ ಕೃಷಿ ವಿಮಾ ಯೋಜನೆ.					
2006-07	ಬಂಗಾರಪೇಟೆ	163	7841.00	0	0.00
	ಕೋಲಾರ	13	1207.00	1	551.00
	ಮಾಲೂರು	0	0.00	0	0.00
	ಮುಳಬಾಗಿಲು	135	46701.00	1	74.00
	ಶ್ರೀನಿವಾಸಪುರ	1	350.00	1	3636.00
ಒಟ್ಟು:		312	56099.00	3	4261.00
2007-08	ಬಂಗಾರಪೇಟೆ	3	502.00	0	0.00
	ಕೋಲಾರ	3	240.00	0	0.00
	ಮಾಲೂರು	0	0.00	0	0.00
	ಮುಳಬಾಗಿಲು	0	0.00	0	0.00
	ಶ್ರೀನಿವಾಸಪುರ	0	0.00	0	0.00
ಒಟ್ಟು:		6	742.00	0	0.00
2008-09	ಬಂಗಾರಪೇಟೆ	1	700.00	0	0.00
	ಕೋಲಾರ	0	0.00	0	0.00
	ಮಾಲೂರು	0	0.00	0	0.00
	ಮುಳಬಾಗಿಲು	2	676.00	0	0.00
	ಶ್ರೀನಿವಾಸಪುರ	0	0.00	0	0.00
ಒಟ್ಟು:		3	1376.00	0	0.00
ಮಹಾಮೊತ್ತ:		321	58217.00	3	4261.00
ಪ್ರಾಯೋಗಿಕ ಹವಾಮಾನ ಆಧಾರಿತ ಬೆಳೆ ವಿಮಾ ಯೋಜನೆ					
2008-09	ಕೋಲಾರ	66	215700.00	66	1582232.00
	ಮುಳಬಾಗಿಲು	288	730410.00	288	2230184.00
ಒಟ್ಟು:		354	946110.00	354	3812416.00
ಎರಡೂ ಯೋಜನೆಗಳ ಒಟ್ಟು:		675	1004327.00	357	3816677.00